ಕಪ್ಪುಚುಕ್ಕೆ' ಎಂದ ಆನಂದ 'ವಳಗೆರೆಯ ಜನ ಅದರಲ್ಲೂ ಹೆಣ್ಣು ಮಕ್ಕಳು ಮಾತ್ರಾ ಅವನ ಬಲೆಗೆ ಬೀಳದೆ ದೂರವೇ ಉಳಿದಿದ್ದಾರೆ ನೋಡು' ಎಂದ.

ಮತ್ತೆ ನಾನು ವಳಗೆರೆಗೆ ಹೋದದ್ದು ನಾಲ್ಕಾರು ವರ್ಷಗಳ ನಂತರ.

ನನ್ನ ಅಪ್ಪ ಅಮ್ಮನಿಗೆ ನಾನೊಬ್ಬನೇ ಮಗ. ಹೊಳೆಯ ನೀರಿನ ಸೆಳವಿಗೆ ಸಿಕ್ಕಿ ಕೊಚ್ಚಿ ಹೋಗಿ ಪ್ರಾಣ ಕಳೆದುಕೊಂಡಿದ್ದರು ನನ್ನ ಅಪ್ಪ ಅಮ್ಮ. ಅಂದಿನಿಂದ ನನ್ನನ್ನು ಸಾಕಿ ಸಲಹಿದ್ದು ಈ ನನ್ನ ಚಿಕ್ಕಮ್ಮ ಚಿಕ್ಕಪ್ಪನೇ. ಚಿಕ್ಕಪ್ಪ ಚಿಕ್ಕಮ್ಮನಿಗೆ ಇಬ್ಬರು ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು. ಮೂವ್ವರೂ ನನಗಿಂತ ಚಿಕ್ಕವರು. ಗಂಡು ಮಕ್ಕಳಿಬ್ಬರೂ ಉಂಡಾಡಿಗುಂಡರು. ಗದ್ದೆ ತೋಟದತ್ತ ಒಂದೇ ಒಂದು ಬಾರಿಯೂ ಸುಳಿದವರಲ್ಲ, ಕೈಗೆ ಒಂಚೂರೂ ಕೆಸರು ಮೆತ್ತಿಸಿಕೊಂಡವರಲ್ಲ. ಬೆಳಿಗ್ಗೆ ಎದ್ದವರೇ ನಾಲ್ಕೆಂಟು ತೆಳ್ಳವ್ವು ಮೆದ್ದು, ಕಷಾಯ ಕುಡಿದು ಮನೆಯಿಂದ ಹೊರಬಿದ್ದರು ಅಂದರೆ ಮತ್ತೆ ಅವರು ಮನೆಗೆ ಮರಳುತ್ತಿದ್ದುದು ಮಧ್ಯಾಹ್ನದ ಊಟದ ಹೊತ್ತಿಗೆ. ಮಧ್ಯಾಹ್ನದ ಊಟವನ್ನು ಗಡದ್ದಾಗಿ ಹೊಡೆದು, ಸಣ್ಣ ನಿದ್ದೆ ತೆಗೆದು ಪುನಃ ಮನೆಯಿಂದ ಹೊರಡುತ್ತಿದ್ದ ಇವರ ದರ್ಶನ ನಡುರಾತ್ರಿಯ ವೇಳೆ. ಈ ತನ್ನ ಮಕ್ಕಳ ಉಂಡಾಡಿತನದ ಬಗ್ಗೆ ನನ್ನ ಚಿಕ್ಕಪ್ಪ ತನ್ನ ಹೆಂಡತಿಯೊಂದಿಗೆ ದಿನವೂ ಜಗಳ ಕಾಯುತ್ತಿದ್ದ. ಮಕ್ಕಳಿಗೂ ಬೈಯ್ಯುತ್ತಿದ್ದ. ಚಿಕ್ಕಮ್ಮ ತನ್ನ ಮಕ್ಕಳನ್ನು ವಹಿಸಿಕೊಂಡು ಮಾತನ್ನಾಡುತ್ತಿದ್ದಳು. ಒಮ್ಮೆಯೂ ಮಕ್ಕಳನ್ನು ಗದರಿದ್ದಿಲ್ಲ; ಅವರಿಗೆ ಬುದ್ಧಿಮಾತು ಹೇಳಿದ್ದಿಲ್ಲ.

ರಜಾ ದಿನಗಳಲ್ಲಿ ಮನೆಗೆ ಬಂದಾಗ ಕೆಲ ದಿನ ಬೆಳ್ಳಂಬೆಳಗ್ಗೆ ಚಿಕ್ಕಮ್ಮ ಮನೆಯಿಂದ ಹೊರಟು ಹೋಗುತ್ತಿದ್ದಳು. ಸಂಜೆ ಮನೆಗೆ ಮರಳುತ್ತಿದ್ದಳು. ಸಂಜೆ ಗಂಡ ಹೆಂಡತಿಯರ ನಡುವೆ ಮಾತಿನ ಚಕಮಕಿ, ಜಗಳ. ಚಿಕ್ಕಮ್ಮನ ಮಗಳು ನನ್ನ ತಂಗಿ ತನ್ನ ಅಪ್ಪನ ಪರವಾಗಿ ಮಾತನ್ನಾಡುತ್ತಿದ್ದಳು. ತಾಯಿಯ ವರ್ತನೆಯನ್ನು ಜರೆಯುತ್ತಿದ್ದಳು.

ಚಿಕ್ಕಮ್ಮ ಚಿಕ್ಕಪ್ಪರ ನಡುವೆ ನಡೆಯುತ್ತಿದ್ದ ಜಗಳದ ಮೂಲ ವಳಗೆರೆ ಎಂಬುದು ನನಗೆ ಅವರ ಮಾತುಕತೆಯ ವರಸೆಯಿಂದಲೇ ತಿಳಿಯುತ್ತಿತ್ತು. ವಳಗೆರೆಯ ಆ ಒಳ ಗೆರೆಯ ಅರ್ಥವೂ ನಿಧಾನವಾಗಿ ಆಗತೊಡಗಿತ್ತು. ಆದರೆ... ನನ್ನನ್ನು ಫ್ರೀ ಹಾಸ್ಟೆಲ್‌ನಲ್ಲಿ ಸೇರಿಸಿ, ನನ್ನನ್ನು ಇಷ್ಟು ಓದಿಸಿ, ನನಗೆ ನೌಕರಿ ಸಿಗಲು ಮೂಲತಃ ಕಾರಣಳಾಗಿದ್ದ ಚಿಕ್ಕಮ್ಮನ ಬಗ್ಗೆ ಅಪಸ್ವರದ ಮಾತನ್ನಾಡಲು ನನ್ನ ಮನಸ್ಸು ಒಪ್ಪುತ್ತಿರಲಿಲ್ಲ. ಮೂಕಪ್ರೇಕ್ಷಕನಾಗಿ ಅವರ ಜಗಳ ಕೇಳುತ್ತಿದ್ದೆ.

ಒಮ್ಮೆ ಚಿಕ್ಕಮ್ಮನ ಮಗಳು ನನ್ನ ತಂಗಿ ನನ್ನ ಬಳಿ ಹೇಳಿದಳು: 'ಅಣ್ಣಾ, ನೀನು ಓದಿದವನು, ಡಿಗ್ರಿ ಪಡೆದವನು. ನೌಕರಿಯಲ್ಲೂ ಇದ್ದೀಯೆ. ನೀನಾದರೂ ಅಮ್ಮನಿಗೆ ಒಂದು ಮಾತು ಹೇಳಬಾರದಾ?'

'ಒಂದು ಮಾತಾ... ಯಾವುದರ ಬಗ್ಗೆ?' ಅರ್ಥವಾಗಿದ್ದರೂ ಅರ್ಥವಾಗದಿರುವಂತೆ ಕೇಳಿದ್ದೆ ನಾನು.

'ಇಡೀ ಮಂದಳ್ಳಿ ಊರಿಗೆ ಊರೇ ಅಮ್ಮನ ಬಗ್ಗೆ ಮಾತನ್ನಾಡುತ್ತಿದೆ. ಈ ವಯಸ್ಸಿನಲ್ಲಿಯೂ ಅದೆಂಥಾ ಚಪಲವೋ ಏನೋ... ವಾರಕ್ಕೊಮ್ಮೆಯೋ... ಎರಡು ಬಾರಿಯೋ ಆ ವಳಗೆರೆಗೆ ಹೋಗಿಬರುವ ಅಗತ್ಯವಾದರೂ ಅಮ್ಮನಿಗೆ ಏನು? ಅಮ್ಮನ ಈ ವರ್ತನೆಯನ್ನು ಇಷ್ಟು ವರ್ಷ ಅಪ್ಪ ಹೇಗೆ ಸಹಿಸಿಕೊಂಡನೋ ಏನೋ... ಮರ್ಯಾದೆಗೆ ಅಂಜಿ ಸುಮ್ಮನಿದ್ದ ಅಷ್ಟೇ ಅನ್ನಿಸುತ್ತದೆ ನನಗೆ. ನೀನಾದರೂ ಒಂದು ಮಾತು ಹೇಳಿದರೆ ಅಮ್ಮ ತಿದ್ದಿಕೊಂಡಾಳು.'

ಇಲ್ಲ... ಚಿಕ್ಕಮ್ಮನಿಗೆ ಆ 'ಒಂದು ಮಾತು' ಹೇಳಲು ನಾನು ಮುಂದಾಗಲಿಲ್ಲ.